ಮಂಡಳಿ ಗ್ರಾಹಕರಿಂದ ಬರಬೇಕಾದ ಕಾಲ ಮೀರಿದ ಪಾವತಿಗೆ ಬಡ್ಡಿ ವಿಧಿಸುತ್ತದೆ. ಮಂಡಳಿಯೂ ಸಹ ಗ್ರಾಹಕರು ಮಂಡಳಿಯಲ್ಲಿಟ್ಟಿರುವ ವಿದ್ಯುತ್ ಬಳಕೆಯ ಬಗೆಗಿನ ಠೇವಣಿ ಹಣದ ಮೇಲೆ ಶೇಕಡಾ ೧೦ರಷ್ಟು ಬಡ್ಡಿ ನೀಡುತ್ತದೆ ಇದು ೧೦-೦೦ ಮತ್ತು ಅದಕ್ಕೆ ಮೀರಿದ ಮೊತ್ತಗಳಿಗೆ ಮಾತ್ರ ಅನ್ವಯಿಸಿದ್ದು ಇದು ದಿನಾಂಕ ೧-೨-೧೯೮೬ ರಿಂದ ಜಾರಿಗೆ ಬಂದಿದೆ. ಈ ಬಡ್ಡಿ ಹಣವನ್ನು ಗ್ರಾಹಕರ ಬಿಲ್ಲಿನ ಹಣಕ್ಕೆ ಸರಿಹೊಂದಿಸಿಕೊಳ್ಳಲಾಗುತ್ತದೆ.

೧೩. ಮೈಸೂರು ಜಿಲ್ಲೆಯಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇರುವುದು

ಶ್ರೀ ಎಂ ಶಿವಣ್ಣ (ಹೆಗ್ಗಡದೇವನಕೋಟೆ) —ಮೈಸೂರು ಜಿಲ್ಲೆಯಲ್ಲಿ ಅನೇಕ ಗ್ರಾಮ ಲೆಕ್ಕಿಗ ಹುದ್ದೆಗಳು ಖಾಲಿ ಇದ್ದು, ಇದರಿಂದ ಜಿಲ್ಲೆಯಲ್ಲಿ ತೊಂದರೆಯುಂಟಾಗುತ್ತಿದೆ ಎಂದು ತಿಳಿದ ನಂತರ ಈ ಹುದ್ದೆಗಳ ನೇಮಕಾತಿಗಾಗಿ ಅರ್ಜಿಗಳನ್ನು ಕರೆದು ಸಂದರ್ಶನ ಮಾಡಲಾಯಿತು ಸಂದರ್ಶನವಾಗಿ ಒಂದು ವರ್ಷವಾಯಿತು. ಸಂದರ್ಶನಕ್ಕೆ ಹಾಜರಾಗಿ ಬಂದ ಸಾವಿರಾರು ಅಭ್ಯರ್ಥಿಗಳು ನೇಮಕಾತಿ ಆಜ್ಞೆ ಬರಬಹುದೆಂದು ಕಾಯುತ್ತಾ ಕುಳಿತ್ತಿದ್ದಾರೆ. ದಿನಬೆಳಿಗಾದರೆ ಸಂಬಂಧಿಸಿದವರನ್ನು ಕೇಳುತ್ತಿದ್ದಾರೆ ಆದರೆ ಉತ್ತರ ಶೂನ್ಯವಾಗಿದೆ.

ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲಾಗುವುದಾಗಿ ಸಚಿವರು ಈ ಸದನದಲ್ಲಿಯೇ ಹೇಳಿದ್ದರೂ ಸಹ ಇದುವರೆವಿಗೆ ನೇಮಕಾತಿಯಾಗಲಿಲ್ಲ, ಮಂಡಲ ಪಂಚಾಯಿತಿಗಳ ರಚನೆ ನಂತರ ಗ್ರಾಮಲೆಕ್ಕಿಗರಿಗಿದ್ದ ಕಾರ್ಯಭಾರಗಳು ಕಡಿಮೆಯಾಗಿದ್ದರಿಂದ ಈ ಸಂಖ್ಯೆಯನ್ನು ಕಡಿತಗೊಳಿಸಲು ಸರಕಾರ ಉದ್ದೇಶಿಸಿದೆ ಎಂದು ಕೇಳಿಬರುತ್ತಿದೆ. ಈ ರೀತಿ ಮಾಡಿದಲ್ಲಿ ಈಗಾಗಲೇ ಸಂದರ್ಶನ ಮುಗಿಸಿ ನೇಮಕಾತಿ ಆಜ್ಞೆ ಬರಬಹುದೆಂದು ಕಾಯುತ್ತಾ ಕುಳಿತಿರುವವರ ಪರಿಸ್ಥಿತಿ ಏನು ಎಂಬ ಬಗ್ಗೆ ಈ ವಿಚಾರಗಳಲ್ಲಿ ಮಾನ್ಯ ಕಂದಾಯ ಸಚಿವರು ಸರಕಾರದ ನಿಲುವೇನು ಎಂಬ ಬಗ್ಗೆ ತಿಳಿಸಬೇಕೆಂದು ಮಾನ್ಯ ಕಂದಾಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ತರಿಸಿ ಕೊಡುತ್ತೇನೆ.

೧೪. ಹಂಕ್ಯೇರಿ ತಾಲ್ಲೂಕಿನ ದಡ್ಡಿ ಹಾಗೂ ಕಂರಣಿ ಗ್ರಾಮಂಗಳಲ್ಲಿ ಮಂಜೂರಾಗಿದ್ದ ಹಿಂದುಳಿದ ವಿದ್ಯಾರ್ಥಿನಿಲಯವನ್ನು ಕಟ್ಟದೇ ಇರುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಮತ ಕ್ಷೇತ್ರದ ದಡ್ಡಿ ಹಾಗೂ ಕಂರಣಿ ಗ್ರಾಮದಲ್ಲಿ ಮಂಜೂರಾಗಿರುವ ಹಿಂದುಳಿದ ಜನಾಂಗದ ವಿದ್ಯಾರ್ಥಿಗಳಿಗಾಗಿ ಮಂಜೂರಾಗಿರುವ ವಿದ್ಯಾರ್ಥಿನಿಲಯಗಳನ್ನು ಕಟ್ಟದೆ ಇರುವುದು ಸಾರ್ವಜನಿಕರಲ್ಲಿ ಕುತೂಹಲವನ್ನುಂಟು ಮಾಡಿದೆ. ದಡ್ಡಿಯಲ್ಲಿ ಕಟ್ಟುತ್ತಿರುವ ವಿದ್ಯಾರ್ಥಿನಿಲಯವನ್ನು ಭೂಸೇನಾ ನಿಗಮಕ್ಕೆ ವಹಿಸಿಕೊಡಲಾಗಿದ್ದು ಹಣಕಾಸಿನ ತೊಂದರೆ ಇರುವುದರಿಂದ ಅವರು ಕಟ್ಟುವುದನ್ನು ನಿಲ್ಲಿಸಿರುತ್ತಾರೆ. ಹಣ ಕಾಸಿನ ವ್ಯವಸ್ಥೆ ಬಗ್ಗೆ ಯಾವ ಇಲಾಖೆಗೆ ಸಂದರ್ಶನ ಮಾಡ ಬೇಕಾಗಿದೆ ಎಂಬುದು ತಿಳಿಯಲಾರದ ಸಮಸ್ಯೆಯಾಗಿದೆ. ಕಂರಣಿ ಗ್ರಾಮದಲ್ಲಿ ಕಟ್ಟಬೇಕಾಗಿರುವ ವಿದ್ಯಾರ್ಥಿನಿಲಯದ ಕಟ್ಟಡಕ್ಕೆ ಸ್ಥಳಾವಕಾಶ ಮಾಡಿಕೊಟ್ಟರೂ ಕೂಡ ಕೆಲಸವು ರಾಜಕೀಯ ತೊಂದರೆಯಿಂದ ನಿಂತುಹೋಗಿದೆ. ಈ ಬಗ್ಗೆ ಜಿಲ್ಲಾಪರಿಷತ್ತು, ಬೆಳಗಾವಿ ಇವರಿಗೆ ಕೇಳಿದರೂ ಯಾವುದೇ ನಿರ್ದಿಷ್ಟ ಕ್ರಮ ಕೈಗೊಂಡಿಲ್ಲ. ಸರಕಾರದಲ್ಲಿರುವ ಮಂತ್ರಿಗಳಿಗೆ ಪ್ರಶ್ನೆ ಕೇಳಿದರೆ ವಿಶ್ವಾಮಿತ್ರನ ಹಾಗೆ ಜಿಲ್ಲಾ ಪರಿಷತ್ತಿನ ಕಡೆಗೆ ತಪ್ಪು ದೃಷ್ಟಿಯನ್ನು ಹಾಗೂ ಅಸಹಾಯಕತೆಯನ್ನು ತೋರಿಸುತ್ತಾರೆ. ಇದು ಸಹಜ ಹಾಗೂ ದಿನನಿತ್ಯದ ಕಾರ್ಯವಾಗಿದೆ. ಕಾರಣ ಸಮಾಜ ಕಲ್ಯಾಣ ಮಂತ್ರಿಗಳು ಈ ಬಗ್ಗೆ ಕೂಡಲೇ ಯೋಗ್ಯಕ್ರಮ ಕೈಗೊಂಡು ಈ ಎರಡೂ ಕಟ್ಟಡಗಳನ್ನು ಪೂರ್ತಿಮಾಡುವಂತೆ ಹಣಕಾಸಿನ ವ್ಯವಸ್ಥೆ ಮಾಡಿ ವಿದ್ಯಾರ್ಥಿಗಳು ಅನುಭವಿಸುತ್ತಿರುವ ತೊಂದರೆಯನ್ನು ನಿವಾರಿಸುವುದಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳುತ್ತಾರೆಂದು ಭಾವಿಸುತ್ತೇನೆ. ಈ ಬಗ್ಗೆ ಸದನದಲ್ಲಿ ಹೇಳಿಕೆಯನ್ನು ಅಪೇಕ್ಷಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡುತ್ತೇನೆ.